**ಬೆಂಗಳೂರು:** ತಂದೆ ಬುದ್ಧಿವಾದ ಹೇಳಿದ್ದಕ್ಕೆ ಮನನೊಂದ ಯುವತಿಯೊಬ್ಬಳು ನೇಣುಬಿಗಿದು ಆತ್ಮಹತ್ಯೆಗೆ ಶರಣಾದ ಘಟನೆ ಚಾಮರಾಜಪೇಟೆ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ. ಶ್ರಾವ್ಯಾ ಡಿ. (19) ಮೃತ ಯುವತಿ. ಖಾಸಗಿ ಕಾಲೇಜಿನಲ್ಲಿ ಬಿಬಿಎ ವ್ಯಾಸಂಗ ಮಾಡುತ್ತಿದ್ದ ಶ್ರಾವ್ಯಾ ಮನೆಯಲ್ಲಿ ಕೌಟುಂಬಿಕ ಜಗಳದ ವಿಚಾರವಾಗಿ ನೊಂದಿದ್ದಳು. ಅಲ್ಲದೆ ಶುಕ್ರವಾರ ರಾತ್ರಿ ಮಲಗುವಾಗ ಬೆಡ್‌ಶೀಟ್ ವಿಚಾರಕ್ಕೆ ಶ್ರಾವ್ಯಾ ಹಾಗೂ ಸಹೋದರಿ ನಡುವೆ ಗಲಾಟೆಯಾಗಿತ್ತು. ಆ ಸಂದರ್ಭ ದಲ್ಲಿ ಶ್ರಾವ್ಯಾಗೆ ಅವರ ತಂದೆ ಬೈದು ಬುದ್ಧಿವಾದ ಹೇಳಿದ್ದರು. ಇದರಿಂದ ನೊಂದು ಶ್ರಾವ್ಯಾ ಮನೆಯಲ್ಲಿ ನೇಣು ಬಿಗಿದುಕೊಂಡು ಆತ್ಮಹತ್ಯೆಗೆ ಶರಣಾಗಿದ್ದಾಳೆ ಎಂದು ತಿಳಿದುಬಂದಿದೆ. ಚಾಮರಾಜಪೇಟೆ ಠಾಣೆಯಲ್ಲಿ ಪ್ರಕರಣ ವರದಿಯಾಗಿದೆ. ಮೃತದೇಹವನ್ನು ಮರ ಣೋತ್ತರ ಪರೀಕ್ಷೆಗಾಗಿ ವಿಕ್ಟೋರಿಯಾ ಆಸ್ಪತ್ರೆಗೆ ರವಾನಿಸಲಾಗಿದೆ ಎಂದು ಪೊಲೀಸರು ತಿಳಿಸಿದರು.

### ಪತಿಯಿಂದಲೇ ಪತ್ನಿಯ ಹತ್ಯೆ

ಬೆಂಗಳೂರು: ಪತಿಯಿಂದಲೇ ಪತ್ನಿ ಬರ್ಬರವಾಗಿ ಹತ್ಯೆಗೀಡಾದ ಘಟನೆ ಶುಕ್ರವಾರ ರಾತ್ರಿ ಬಾಗಲೂರು ಠಾಣೆ ವ್ಯಾಪ್ತಿಯ ಸಿಂಗೇನಹಳ್ಳಿಯಲ್ಲಿ ನಡೆದಿದೆ. ಮಚ್ಚಿನಿಂದ ಹೊಡೆದು ಸುಧಾ ಎಂಬಾಕೆಯನ್ನು ಕೊಲೆ ಮಾಡಲಾಗಿದೆ. ಆರೋಪಿ ಪತಿ ಶ್ರೀನಿವಾಸ್‌ನನ್ನು ಪೊಲೀಸರು ಬಂಧಿಸಿದ್ದಾರೆ. ಕೋಳಿ ಅಂಗಡಿ ನಡೆಸು ತ್ತಿದ್ದ ಶ್ರೀನಿವಾಸ್, ನಿತ್ಯ ಪಾನಮತ್ತನಾಗಿ ಪತ್ನಿ ಯೊಂದಿಗೆ ಗಲಾಟೆ ಮಾಡುತ್ತಿದ್ದ. ಗಂಡನ ಕಾಟಕ್ಕೆ ಬೇಸತ್ತ ಸುಧಾ, ಹೊಸಕೋಟೆಯಲ್ಲಿರುವ ತವರು ಮನೆ ಸೇರಿದ್ದಳು. ಒಂದು ತಿಂಗಳ ಹಿಂದೆಯಷ್ಟೆ ಕುಟುಂಬದವರು ರಾಜಿ ಮಾಡಿದ ಬಳಿಕ ಗಂಡನ ಮನೆಗೆ ಮರಳಿದ್ದಳು. ಎರಡು ದಿನಗಳಿಂದ ಪುನಃ ಗಲಾಟೆ ಆರಂಭಿಸಿದ್ದ ಶ್ರೀನಿವಾಸ್, ತಡರಾತ್ರಿ ಕೋಳಿ ಕತ್ತರಿಸುವ ಮಚ್ಚಿನಿಂದ ಸುಧಾಳ ತಲೆ, ಕೈಗೆ ಹೊಡೆದು ಹತ್ಯೆಗೈದಿದ್ದಾನೆ. ಈ ಬಗ್ಗೆ ಬಾಗಲೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕೆಂಗೇರಿಯ ದೇವರಾಜ್ ನಿವಾಸದಲ್ಲಿ ತಡರಾತ್ರಿವರೆಗೂ ನಡೆದ ತಪಾಸಣೆ


ದಾಖಲೆ ಪರಿಶೀಲನೆ ಮುಗಿಸಿ ಹೊರಟ ಅಧಿಕಾರಿಗಳಿಗೆ ದೇವರಾಜ್ ಹಸ್ತಲಾಘವ

# ಮುಡಾ ಹಗರಣ: ಇಡಿ ಶೋಧ

**ಬೆಂಗಳೂರು:** ಮುಡಾ ನಿವೇಶನ ಹಂಚಿಕೆ ಹಗರಣ ಪ್ರಕರಣಕ್ಕೆ ಸಂಬಂಧಿಸಿದಂತೆ ಕೆಂಗೇರಿಯಲ್ಲಿರುವ ದೇವರಾಜ್ ನಿವಾಸದ ಮೇಲೆ ಶುಕ್ರವಾರ ದಾಳಿ ನಡೆಸಿದ್ದ ಜಾರಿ ನಿರ್ದೇಶನಾಲಯದ ಅಧಿಕಾರಿಗಳು ತಡರಾತ್ರಿವರೆಗೂ ವಿಚಾರಣೆ ನಡೆಸಿದರು.

ಭೂ ಮಾಲೀಕ ದೇವರಾಜ್ ಮನೆ ಮೇಲೆ ದಾಳಿ ನಡೆಸಿದ್ದ ಇ.ಡಿ ಅಧಿಕಾರಿಗಳು ಮಧ್ಯರಾತ್ರಿ 12 ಗಂಟೆ ವರೆಗೂ ವಿಚಾರಣೆ ನಡೆಸಿದರು. ಈ ವೇಳೆ ಪ್ರಮುಖ ದಾಖಲೆಗಳ ಪರಿಶೀಲನೆ ಮಾಡಿದರು. ವಿಚಾರಣೆ ಬಳಿಕ ಹೊರಟು ನಿಂತ ಅಧಿಕಾರಿಗಳಿಗೆ ದೇವರಾಜ್ ಅವರು ಹಸ್ತಲಾಘವ ಮಾಡಿ ಕಳಿಸಿಕೊಟ್ಟರು.

ದೇವರಾಜ್ ಕುಟುಂಬಕ್ಕೆ ಮೈಸೂರಿನ ಜಾಮೀನು ಬಂದಿದ್ದು ಹೇಗೆ? ಅದರ ಮೂಲ ಯಾವುದು? ಅದನ್ನ ಯಾವಾಗ ಮಾರಾಟ ಮಾಡಿದ್ದು? ಹೀಗೆ ನಾನಾ ವಿಚಾರಗಳ ಬಗ್ಗೆ ಹಾಗೂ ದಾಖಲೆಗಳ ಬಗ್ಗೆ ಇ.ಡಿ ಅಧಿಕಾರಿಗಳು ಸುದೀರ್ಘ ವಿಚಾರಣೆ ನಡೆಸಿದರು. ಸಿಎಂ ವಿರುದ್ಧದ ಮುಡಾ ಹಗರಣ ಆರೋಪ ಪ್ರಕರಣದಲ್ಲಿ ನಿವೇಶನ ಮೂಲ ಮಾಲೀಕ ದೇವರಾಜ್. ಲೋಕಾಯುಕ್ತ ದಾಖಲಿಸಿಕೊಂಡಿರುವ ದೂರಿನಲ್ಲಿ ಅವರು ನಾಲ್ಕನೇ ಆರೋಪಿಯಾಗಿದ್ದಾರೆ. ಸಿಎಂ ಸಿದ್ದರಾಮಯ್ಯ ಅವರ ಭಾವಮೈದುನ



ಮಲ್ಲಿಕಾರ್ಜುನ್‌ಗೆ ದೇವರಾಜ್ ಜಮೀನು ಮಾರಿದ್ದರು.

**ಪ್ರಮುಖ ದಾಖಲೆಗಳೇ ನಾಪತ್ತೆ:** ಮುಡಾ ಸೈಟ್ ಹಗರಣಕ್ಕೆ ಸಂಬಂಧಿಸಿದಂತೆ ಇ.ಡಿ ಅಧಿಕಾರಿಗಳ ಕಾರ್ಯಾಚರಣೆ ವೇಳೆ ಅಚ್ಚರಿಯ ಅಂಶ ಹೊರಬಿದ್ದಿದೆ. ಮೈಸೂರಿನ ಮುಡಾ ಕಚೇರಿಯಲ್ಲಿ ಇ.ಡಿ ಅಧಿಕಾರಿಗಳ ದಾಳಿ ವೇಳೆ 1992ರ ಪ್ರಮುಖ ದಾಖಲೆಯೇ ನಾಪತ್ತೆಯಾಗಿರುವ ಸಂಗತಿ ಬೆಳಕಿಗೆ ಬಂದಿದೆ. ಸಿಎಂ ಸಿದ್ದರಾಮಯ್ಯ ವಿರುದ್ಧದ ಮುಡಾ ಬಹುಕೋಟಿ ಹಗರಣ ಪ್ರಕರಣದಲ್ಲಿ ಶುಕ್ರವಾರ ಮುಡಾ ಕಚೇರಿ ಮೇಲೆ ಇ.ಡಿ ಅಧಿಕಾರಿಗಳು ದಾಳಿ ನಡೆಸಿದರು. ಈ ವೇಳೆ ಮಹತ್ವದ ದಾಖಲೆಗಳನ್ನು ವಶಕ್ಕೆ ಪಡೆದು ಪರಿಶೀಲನೆ ನಡೆಸಿದರು. ದಾಳಿಮಾಡಿದ್ದ ಇಡಿ ಅಧಿಕಾರಿಗಳೇ ಅಚ್ಚರಿಗೆ ಒಳಗಾಗಿದ್ದಾರೆ.

ಡಿನೋಟಿಫೈ ಮಾಡಿ ನೋಟಿಫೈ ಮಾಡಲು ತೆಗೆದುಕೊಂಡ ನಿರ್ಧಾರದ ದಾಖಲೆಗಳೇ ನಾಪತ್ತೆಯಾಗಿವೆ. 1992 ರ ಫೆಬ್ರವರಿ ತಿಂಗಳಿನ ಕೆಲ ದಾಖಲೆಗಳು ಮಿಸ್ಸಿಂಗ್ ಆಗಿವೆ. ಅದೇ ಸಂದರ್ಭದಲ್ಲಿ ಡಿನೋಟಿಫೈ ಆಗಿದ್ದ ಭೂಮಿಯ ಪರಭಾರೆಯಾಗಿತ್ತು. ಮುಡಾದ ತೆಕ್ಕೆಯಲ್ಲಿದ್ದ ಜಮೀನು ಮತ್ತೆ ಕೃಷಿಭೂಮಿಯಾಗಿ ಪರಿವರ್ತಿಸಲು ತೆಗೆದುಕೊಂಡ ಕ್ರಮ, ತಹಶೀಲ್ದಾರ್ ಮತ್ತು ಆಗಿನ ಜಿಲ್ಲಾಧಿಕಾರಿಗಳು ಮಾಡಿದ ಶಿಫಾರಸ್ಸಿನ ಪತ್ರಗಳು, ಈ ದಾಖಲೆಯ ಪ್ರಮುಖ ಶಿಫಾರಸಿನ ಪತ್ರಗಳು, ಕೃಷಿಭೂಮಿ ಮಾಡಲು ತೆಗೆದುಕೊಂಡ ತೀರ್ಮಾನ ನಡಾವಳಿಯ ಪತ್ರಗಳು ನಾಪತ್ತೆಯಾಗಿವೆ. ಈ ಪ್ರಮುಖ ದಾಖಲೆಗಳನ್ನೇ ವಶಕ್ಕೆ ಪಡೆಯಲು ಇಡಿ ಸಂಪೂರ್ಣ ಪ್ರಯತ್ನ ಮಾಡುತ್ತಿದೆ. 16 ಗಂಟೆಗಳ ನಿರಂತರ ದಾಳಿಯಲ್ಲಿ ಪ್ರಮುಖ ದಾಖಲೆಗಾಗಿ ಅಧಿಕಾರಿಗಳು ಹುಡುಕಾಟ ನಡೆಸಿದ್ದಾರೆ.

ಬ್ಯಾಂಕ್ ಕ್ರಮ ಎತ್ತಿ ಹಿಡಿದ ಹೈಕೋರ್ಟ್

## ಹರಾಜಿನಲ್ಲಿ ಖರೀದಿಸಿದ ಆಸ್ತಿ: ಬಾಕಿ ಪಾವತಿಸದಿದ್ದಲ್ಲಿ ಠೇವಣಿ ಮುಟ್ಟುಗೋಲು

**ಬೆಂಗಳೂರು:** ಬ್ಯಾಂಕ್‌ನ ಹರಾಜಿನಲ್ಲಿ ಆಸ್ತಿಯನ್ನು ಖರೀದಿಸಿದವರು ನಿಗದಿತ ಅವಧಿಯಲ್ಲಿ ಬಾಕಿ ಮೊತ್ತ ಪಾವತಿಸದಿದ್ದಲ್ಲಿ ಮುಂಗಡವಾಗಿ ಠೇವಣಿಯನ್ನು ಬ್ಯಾಂಕ್ ಮುಟ್ಟುಗೋಲು ಹಾಕಿಕೊಳ್ಳಬಹುದು ಎಂದು ಹೈಕೋರ್ಟ್ ಹೇಳಿದೆ.



ಉಡುಪಿ ಜಿಲ್ಲೆ ಕಾರ್ಕಳದ ಕೆ. ಸುಬ್ರಹ್ಮಣ್ಯರಾವ್ ಮತ್ತು ಅವರ ಪತ್ನಿ ಎಚ್. ಎಂ ನಾಗರತ್ನ ಅವರಿಗೆ 3.25 ಕೋಟಿ ರು.ಗಳನ್ನು ಮರು ಪಾವತಿಸುವಂತೆ ನಿರ್ದೇಶನ ನೀಡಿದ್ದ ಏಕಸದಸ್ಯ ಪೀಠದ ಆದೇಶವನ್ನು ಪ್ರಶ್ನಿಸಿ ಹೈಕೋರ್ಟ್‌ನ ದ್ವಿಸದಸ್ಯ ಪೀಠಕ್ಕೆ ಕೆನರಾ ಬ್ಯಾಂಕ್ ಮೇಲ್ಮನವಿ ಸಲ್ಲಿಸಿತ್ತು. ಅರ್ಜಿಯ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಎನ್. ವಿ ಅಂಜಾರಿಯಾ ಮತ್ತು ನ್ಯಾಯಮೂರ್ತಿ ಕೆ. ವಿ ಅರವಿಂದ್ ಅವರಿದ್ದ ನ್ಯಾಯಪೀಠ ಈ ಅಭಿಪ್ರಾಯ ವ್ಯಕ್ತಪಡಿಸಿದೆ.

ಜತೆಗೆ, ಮುಂಗಡ ಠೇವಣಿ ಇಟ್ಟಿರುವ ಹಣವನ್ನು ಹಿಂದಿರುಗಿಸುವ ಮನವಿಯನ್ನು ಅಂಗೀಕರಿಸಲು ಅವಕಾಶವಿಲ್ಲ. ಬ್ಯಾಂಕ್ ಅಧಿಕಾರಿಗಳು ಅನ್ಯಾಯವೆಸಗಿಲ್ಲ, ಅವಧಿಯನ್ನು ವಿಸ್ತರಿಸಿದ್ದರೂ ಬಿಡ್ ಬಾಕಿ ಮೊತ್ತವನ್ನು ನಿಗದಿತ ಅವಧಿಯಲ್ಲಿ ಪಾವತಿ ಮಾಡುವಲ್ಲಿ ರಾವ್ ದಂಪತಿ ವಿಫಲರಾಗಿದ್ದಾರೆ ಎಂದು ಪೀಠ ಹೇಳಿದೆ.

ಅಲ್ಲದೆ, ಸುಪ್ರೀಂಕೋರ್ಟ್‌ನ ತೀರ್ಪನ್ನು ಉಲ್ಲೇಖಿಸಿರುವ ದ್ವಿಸದಸ್ಯ ಪೀಠ, ಭದ್ರತಾ ಹಿತಾಸಕ್ತಿ ನಿಯಮಗಳು 2002ರ ನಿಯಮ 9(5) ಪ್ರಕಾರ ಹರಾಜಿನಲ್ಲಿ ಖರೀದಿದಾರ ಕಂತು ಪಾವತಿಸುವಲ್ಲಿ ಸುಸ್ತಿದಾರರಾದಲ್ಲಿ ಠೇವಣಿ ಹಣ ಮುಟ್ಟುಗೋಲು ಹಾಕಿಕೊಳ್ಳಬಹುದು ಎಂದು ಪೀಠ ತಿಳಿಸಿದೆ.

### ಪ್ರಕರಣದ ಹಿನ್ನೆಲೆ

**ಬ್ಯಾಂಕ್ ನೀಡಿದ ಸಾಲವನ್ನು ವಸೂಲಿ ಮಾಡಲು ಬೆಂಗಳೂರಿನ ವಿಲ್ಸನ್ ಗಾರ್ಡನ್‌ನಲ್ಲಿರುವ ಆಸ್ತಿಯೊಂದನ್ನು 2021ರ ನವೆಂಬರ್ 29 ರಂದು ಇ-ಹರಾಜು ನಡೆಸಿತ್ತು. ಸುಬ್ರಹ್ಮಣ್ಯ ರಾವ್ ಮತ್ತ ಅವರ ಪತ್ನಿ ಬಿಡ್‌ನಲ್ಲಿ ಭಾಗವಹಿಸಿ ಯಶಸ್ವಿಯಾಗಿದ್ದರು. ಹೀಗಾಗಿ, ಒಟ್ಟು ಬಿಡ್‌ನ ಮೊತ್ತ 13 ಕೋಟಿಯಾಗಿದ್ದು, ಅದರಲ್ಲಿ ಶೇ. 25ರಷ್ಟು ಅಂದರೆ 3.25 ಕೋಟಿ ರು.ಗಳನ್ನು ಮುಂಗಡವಾಗಿ ಪಾವತಿಸಿದ್ದು, ಇನ್ನುಳಿದ ಮೊತ್ತ 9.75 ಕೋಟಿ ರೂ.ಗಳನ್ನು 15 ದಿನಗಳಲ್ಲಿ ಪಾವತಿ ಮಾಡಬೇಕಾಗಿತ್ತು.**

## ಆನ್‌ಲೈನ್ ಲಾಜಿಸ್ಟಿಕ್ಸ್ ಕಂಪನಿಗಳಿಗೆ ವಂಚನೆ

**ಬೆಂಗಳೂರು:** ಜಿಯೋ-ಸ್ಪೂಫಿಂಗ್ ಅಪ್ಲಿಕೇಶನ್ ಬಳಸಿ ನಕಲಿ ಆರ್ಡರ್‌ಗಳನ್ನು ಮಾಡಿ, ಕ್ಯಾನ್ಸಲ್ ಮಾಡುವ ಮೂಲಕ ಆನ್ಲೈನ್ ಲಾಜಿಸ್ಟಿಕ್ಸ್ ಕಂಪನಿಗಳಿಗೆ 90 ಲಕ್ಷ ರು. ವಂಚಿಸಿದ ನಾಲ್ವರು ಆರೋಪಿಗಳನ್ನು ಆಗ್ನೇಯ ಸಿಇಎನ್ ಠಾಣೆ ಪೊಲೀಸರು ಬಂಧನಕ್ಕೊಳಪಡಿಸಿದ್ದಾರೆ.

ಆರೋಪಿಗಳನ್ನು ಶ್ರೇಯಸ್, ಕೌಶಿಕ್ , ರಂಗನಾಥ್ , ಆನಂದ್ ಕುಮಾರ್ ಎಂದು ಗುರುತಿಸಲಾಗಿದೆ. ಇವರೆಲ್ಲರೂ ಚಾಲಕರಾಗಿ ಕೆಲಸ ಮಾಡುತ್ತಿದ್ದು, ಹಾಸನ ಮತ್ತು ಮಂಡ್ಯ ಮೂಲದವರು. ಪೋರ್ಟರ್ ಲಾಜಿಸ್ಟಿಕ್ ಅಪ್ಲಿಕೇಷನ್‌ನಲ್ಲಿ ಗ್ರಾಹಕರು ಹಾಗೂ ಚಾಲಕರ ಹೆಸರಿನಲ್ಲಿ ತಾವೇ ನಕಲಿ ಐಡಿ ಸೃಷ್ಟಿಸುತ್ತಿದ್ದ ಆರೋಪಿಗಳು, ದೂರದ ಸ್ಥಳಗಳಿಗೆ ಆರ್ಡರ್ ಪ್ಲೇಸ್ ಮಾಡುವ ಮೂಲಕ ಚಾಲಕನ ವ್ಯಾಲೆಟ್‌ಗೆ ಹಣ ಪಾವತಿಸುತ್ತಿದ್ದರು.

**ಸ್ಪೂಫಿಂಗ್ ಆಪ್ ಬಳಸಿ ವಂಚನೆ:** ವ್ಯಾಲೆಟ್‌ಗೆ ಪಾವತಿಸಿದ ಹಣವನ್ನು ತಕ್ಷಣವೇ ಪುನಃ ತಮ್ಮ ಬ್ಯಾಂಕ್ ಖಾತೆಗಳಿಗೆ ವರ್ಗಾಯಿಸಿಕೊಳ್ಳುತ್ತಿದ್ದರು. ನಂತರ ಜಿಯೋ ಸ್ಪೂಫಿಂಗ್ ವಿಪಿಎನ್ ಬಳಸಿಕೊಂಡು ಲೊಕೇಷನ್ ಬದಲಿಸಿ ಚಾಲಕನ ಐಡಿಯಿಂದ ಆರ್ಡರ್ ಮುಕ್ತಾಯಗೊಂಡಿರುವಂತೆ ಬಿಂಬಿಸುತ್ತಿದ್ದರು. ಮತ್ತೊಂದೆಡೆ, ಗ್ರಾಹಕರ ಐಡಿಯಿಂದ ಆರ್ಡರ್ ಕ್ಯಾನ್ಸಲ್ ಆಗಿರುವುದಾಗಿ ಬಿಂಬಿಸಿ, ರಿಫಂಡ್ ಸಹ ಪಡೆದುಕೊಳ್ಳುತ್ತಿದ್ದರು. ಇದೇ ರೀತಿ ಎಂಟು ತಿಂಗಳಿಂದ 90 ಲಕ್ಷ ರು. ವಂಚಿಸಿದ್ದರು.

ಇದನ್ನು ಮನಗಂಡ ಪೋರ್ಟರ್ ಕಂಪನಿಯ ಪ್ರತಿನಿಧಿಗಳು ಬೆಂಗಳೂರಿನ ಆಗ್ನೇಯ ವಿಭಾಗದ ಸಿಇಎನ್ ಪೊಲೀಸ್ ಠಾಣೆಗೆ ದೂರು ನೀಡಿದ್ದರು. ದೂರಿನನ್ವಯ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡ ಪೊಲೀಸರು, ಪೋರ್ಟರ್ ಕಂಪನಿಯೊಂದಿಗೆ ಲಗತ್ತಿಸಿದ ನಂಬರ್ ಹಾಗೂ ಮತ್ತಿತರರ ತಾಂತ್ರಿಕ ಮಾಹಿತಿ ಆಧರಿಸಿ ನಾಲ್ವರು ಆರೋಪಿಗಳನ್ನು ಬಂಧಿಸಿದ್ದಾರೆ. ತನಿಖೆ ಕೈಗೊಂಡ ಪೊಲೀಸರು ಸೆಪ್ಟೆಂಬರ್ 21 ರಂದು ಹಾಸನದಲ್ಲಿ ಶ್ರೇಯಸ್‌ನನ್ನು ಬಂಧಿಸಿದ್ದರು. ಈತನ ವಿಚಾರಣೆ ಬಳಿಕ ಉಳಿದ ಮೂವರು ಆರೋಪಿಗಳನ್ನು ಬಂಧನಕ್ಕೊಳಪಡಿಸಿದರು. ಆರೋಪಿಗಳು ಜಿಯೋ ಸ್ಪೂಫಿಂಗ್ ಮುಖಾಂತರ ತಮಿಳುನಾಡು, ಕೇರಳ ಹಾಗೂ ಪಶ್ಚಿಮ ಬಂಗಾಳದಲ್ಲೂ ಕೂಡ ಇದೇ ರೀತಿ ಪೋರ್ಟರ್ ಕಂಪೆನಿಗೆ ವಂಚಿಸಿರುವುದು ತನಿಖೆಯಿಂದ ತಿಳಿದು ಬಂದಿದೆ.

ಅಟಲ್ ಭೂಜಲ್ ಯೋಜನೆಯಲ್ಲಿ ರಾಜ್ಯ ಉತ್ತಮ ಸಾಧನೆ: ಎನ್.ಎಸ್ ಬೋಸರಾಜು

## ಅಟಲ್ ಭೂಜಲ್ ಯೋಜನೆ ಕಾಮಗಾರಿ ಚುರುಕುಗೊಳಿಸಿ

**ಬೆಂಗಳೂರು:** ರಾಜ್ಯದ 41 ತಾಲೂಕುಗಳಲ್ಲಿ ಜಾರಿಯಲ್ಲಿರುವ ಅಟಲ್ ಭೂಜಲ್ ಯೋಜನೆಯ ಕಾಮಗಾರಿ ಪೂರ್ಣಗೊಳಿಸುವ ನಿಟ್ಟಿನಲ್ಲಿ ಕಾಮಗಾರಿ ಚುರುಕುಗೊಳಿಸಿ ಕಾಲಮಿತಿಯಲ್ಲಿ ಪೂರ್ಣಗೊಳಿಸುವಂತೆ ಸಣ್ಣ ನೀರಾವರಿ ಸಚಿವ ಎನ್.ಎಸ್.ಬೋಸರಾಜು ಸೂಚಿಸಿದ್ದಾರೆ.

ವಿಕಾಸಸೌಧದಲ್ಲಿ ತಮ್ಮ ಕಚೇರಿಯಲ್ಲಿ ಅಟಲ್ ಭೂಜಲ ಯೋಜನೆಯ ಪ್ರಗತಿ ಪರಿಶೀಲನೆ ನಡೆಸಿ ಮಾತನಾಡಿದ ಅವರು, ದೇಶದ 7 ರಾಜ್ಯಗಳಲ್ಲಿ ಅಟಲ್ ಭೂಜಲ ಯೋಜನೆ ಜಾರಿಯಲ್ಲಿದ್ದು, ಸಮುದಾಯದ ಸಹಯೋಗದಲ್ಲಿ ಅಂತರ್ಜಲ ವೃದ್ಧಿ ಹಾಗೂ ಅಂತರ್ಜಲ ಸಮರ್ಪಕ ನಿರ್ವಹಣೆ ಮಾಡುವ ಯೋಜನೆ ಇದಾಗಿದೆ. 7 ರಾಜ್ಯಗಳ ಪೈಕಿ ಕರ್ನಾಟಕ ರಾಜ್ಯಯೋಜನೆ ಉತ್ತಮ ನಿರ್ವಹಣೆಯಲ್ಲಿ ಉತ್ತಮ ಸಾಧನೆ ಮಾಡಿ ಮೊದಲ ಸ್ಥಾನದಲ್ಲಿದೆ. ಇದೇ ರೀತಿ ಸಾಧನೆ ತೋರಿಸುವ ನಿಟ್ಟಿನಲ್ಲಿ ಜಾರಿಯಲ್ಲಿರುವ ಕಾಮಗಾರಿ ಕಾಲಮಿತಿಯಲ್ಲಿ ಪೂರ್ಣಗೊಳಿಸಲು ಕ್ರಮ ಕೈಗೊಳ್ಳಬೇಕು ಎಂದು ಸೂಚಿಸಿದ್ದಾರೆ.

**ಕೇಂದ್ರಕ್ಕೆ ಪ್ರಸ್ತಾವನೆ ಸಲ್ಲಿಸಿ:** ಇದೇ ವೇಳೆ ಪಿಎಂಕೆಎಸ್‌ವೈ ಹಾಗೂ ಆರ್‌ಆರ್‌ಆರ್



**ವಿಕಾಸಸೌಧದಲ್ಲಿ ತಮ್ಮ ಕಚೇರಿಯಲ್ಲಿ ಅಟಲ್ ಭೂಜಲ ಯೋಜನೆಯ ಪ್ರಗತಿ ಪರಿಶೀಲನೆ ನಡೆಸಿದ ಸಣ್ಣ ನೀರಾವರಿ ಸಚಿವ ಎನ್‌ಎಸ್ ಬೋಸರಾಜು.**

ಯೋಜನೆಯ ಅಡಿಯಲ್ಲಿ ರಾಜ್ಯದಿಂದ ಕೇಂದ್ರಕ್ಕೆ ಕಳುಹಿಸಲಾಗಿರುವ ಪ್ರಸ್ತಾವನೆಗಳ ಬಗ್ಗೆ ಅಧಿಕಾರಿಗಳಿಂದ ಮಾಹಿತಿ ಪಡೆದುಕೊಂಡರು. ತುಮಕೂರು ಜಿಲ್ಲಾ ವ್ಯಾಪ್ತಿಯಲ್ಲಿ ಪಿಎಂಕೆಎಸ್‌ವೈ ಯೋಜನೆಯ ಅಡಿಯಲ್ಲಿ ಪ್ರಸ್ತಾವನೆ ಸಿದ್ಧಗೊಳಿಸದ ಅಧಿಕಾರಿಯನ್ನು ಇದೇ ಸಂಧರ್ಭದಲ್ಲಿ ತರಾಟೆಗೆ ತಗೆದುಕೊಂಡು, ಈಗಾಗಲೇ ನಿರ್ದೇಶಿಸಿರುವಂತೆ ಈ ಎರಡೂ ಯೋಜನೆಯ ಅಡಿಯಲ್ಲಿ ಹೆಚ್ಚಿನ ಪ್ರಸ್ತಾವನೆ ಸಿದ್ಧಗೊಳಿಸುವಂತೆ ಸೂಚಿಸಿದ್ದಾರೆ.

ಚುನಾವಣಾ ಟಿಕೆಟ್ ವಂಚನೆ ಆರೋಪ

## ಸಚಿವ ಜೋಶಿ ಸೋದರನ ಬಂಧನ

**ಬೆಂಗಳೂರು:** ಲೋಕಸಭೆ ಚುನಾವಣೆಗೆ ಬಿಜೆಪಿಯಿಂದ ಟಿಕೆಟ್ ಕೊಡಿಸುವುದಾಗಿ 2 ಕೋಟಿ ರು. ವಂಚನೆ ಮಾಡಿದ್ದ ಆರೋಪದಡಿ ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಅವರ ಸಹೋದರ ಗೋಪಾಲ್ ಜೋಶಿಯನ್ನು ಕೊಲ್ಹಾಪುರದಲ್ಲಿ ಪೊಲೀಸರು ಬಂಧಿಸಿದ್ದಾರೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಮೂವರ ವಿರುದ್ಧ ಬಸವೇಶ್ವರನಗರ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿತ್ತು. ಶುಕ್ರವಾರ ಸೋಮಶೇಖರ್ ನಾಯಕ್ ಹಾಗೂ ವಿಜಯ ಕುಮಾರಿ ಎಂಬುವವರನ್ನು ಬಂಧಿಸಲಾಗಿದೆ. ಪ್ರಕರಣ ದಾಖಲಾಗುತ್ತಿದ್ದಂತೆ ತಲೆಮರೆಸಿಕೊಂಡಿದ್ದ ಗೋಪಾಲ್ ಜೋಶಿ, ಮಹಾರಾಷ್ಟ್ರದ ಕೊಲ್ಹಾಪುರದ ವಸತಿಗೃಹದಲ್ಲಿ ಉಳಿದಿದ್ದರು. ಶನಿವಾರ ಬೆಳಗ್ಗೆ 5.30ಕ್ಕೆ ಲಾಡ್ಜ್‌ಗೆ ತೆರಳಿ ಬಂಧಿಸಿದ ಪೊಲೀಸರು ಹುಬ್ಬಳ್ಳಿಗೆ ಕರೆದುಕೊಂಡು ಬಂದಿದ್ದಾರೆ.

ಸುನೀತಾ ಚೌಹಾಣ್ ಎಂಬುವವರು ನೀಡಿದ ದೂರಿನ ಮೇರೆಗೆ ಗೋಪಾಲ್ ಜೋಶಿ ವಿರುದ್ಧ ಪ್ರಕರಣ ದಾಖಲಾಗಿತ್ತು. ಇಂದು ವಿಚಾರಣೆ ಹಾಜರಾಗುವಂತೆ ಸೂಚನೆ ಹಿನ್ನೆಲೆಯಲ್ಲಿ ಹುಬ್ಬಳ್ಳಿ ಕೇಶ್ವಾಪುರ ಪೊಲೀಸ್ ಠಾಣೆಗೆ ಸುನೀತಾ ಚೌಹಾಣ್ ಆಗಮಿಸಿದ್ದರು. ಬಳಿಕ ಅವರನ್ನು ಸ್ಥಳ ಮಹಜರಿಗಾಗಿ ಹುಬ್ಬಳ್ಳಿಯ ಇಂದಿರಾ ಕಾಲೋನಿಯಲ್ಲಿರುವ ಗೋಪಾಲ್ ಮನೆಗೆ ಕರೆದೊಯ್ಯಲಾಗಿತ್ತು. ಎಸಿಪಿ ಚಂದನ್‌ರೊಂದಿಗೆ ಅಶೋಕನಗರ ಪೊಲೀಸರ ತಂಡದಿಂದ ಗೋಪಾಲ್ ಜೋಶಿ ನಿವಾಸದಲ್ಲಿ ಪಂಚನಾಮೆ ಮಾಡಲಾಗಿದೆ.

## ಚಿನ್ನ ಕದ್ದು ತೀರ್ಥಹಳ್ಳಿಯಲ್ಲಿ ಹೂತಿಟ್ಟಿದ್ದ ಕಳ್ಳ

**ಬೆಂಗಳೂರು:** ಖತರ್ನಾಕ್ ಕಳ್ಳನೊಬ್ಬ ಬೆಂಗಳೂರಿನಲ್ಲಿ ಚಿನ್ನವನ್ನು ಕದ್ದು ತೀರ್ಥಹಳ್ಳಿಯ ತನ್ನ ಮನೆಗೆ ತಂದು ಹೂತಿಟ್ಟಿದ್ದ ಪ್ರಕರಣವನ್ನು ಮಾಗಡಿ ಪೊಲೀಸರು ಬಯಲಿಗೆ ತಂದಿದ್ದಾರೆ.

ಹಮೀದ್ ಹಂಜ ಎಂಬಾತ ಬೆಂಗಳೂರಿನ ಮಾಗಡಿಯಲ್ಲಿ ಕಳ್ಳತನ ಮಾಡಿ ತೀರ್ಥಹಳ್ಳಿಯ ಬೆಟ್ಟಮಕ್ಕಿಯಲ್ಲಿರುವ ತನ್ನ ಮನೆಯಲ್ಲಿ ತಂದು ಹೂತಿಟ್ಟಿದ್ದ. ಆರೋಪಿಯನ್ನು ಕರೆ ತಂದಿದ್ದ ಮಾಗಡಿ ಪೊಲೀಸರು 1 ಕೆಜಿಗೂ ಹೆಚ್ಚು ಚಿನ್ನವನ್ನು ವಶಪಡಿಸಿಕೊಂಡಿದ್ದಾರೆ. ಮೂಲತಃ ಆಗುಂಬೆ ಸಮೀಪದ ಗುಡ್ಡೇಕೇರಿಯವನಾದ ಹಂಜನ ಮೇಲೆ 70 ರಿಂದ 80ಕ್ಕೂ ಹೆಚ್ಚು ಪ್ರಕರಣಗಳಿವೆ ಎಂದರು.

## ಪ್ರಕರಣ ರದ್ದತಿ ಅರ್ಜಿ ಹಿಂಪಡೆದ ಡಿ.ಎಸ್. ವೀರಯ್ಯ

**ಬೆಂಗಳೂರು:** ದೇವರಾಜ ಅರಸು ಟ್ರಕ್ ಟರ್ಮಿನಲ್‌ನಲ್ಲಿ ನಕಲಿ ದಾಖಲೆ ಸೃಷ್ಟಿಸಿ 47.10 ಕೋಟಿ ಹಗರಣ ನಡೆಸಿದ ಆರೋಪ ಸಂಬಂಧ ತಮ್ಮ ವಿರುದ್ಧ ದಾಖಲಾಗಿರುವ ದೂರು ರದ್ದತಿಗೆ ಕೋರಿ ಸಲ್ಲಿಸಿದ್ದ ಅರ್ಜಿಯನ್ನು ಮಾಜಿ ಅಧ್ಯಕ್ಷ ಹಾಗೂ ಬಿಜೆಪಿಯ ವಿಧಾನ ಪರಿಷತ್ ಮಾಜಿ ಸದಸ್ಯ ಡಿ.ಎಸ್. ವೀರಯ್ಯ ಹಿಂಪಡೆದಿದ್ದಾರೆ.

ಡಿಡಿಯುಟಿಟಿಎಲ್ ವ್ಯವಸ್ಥಾಪಕ ನಿರ್ದೇಶಕ ಸಿ ಎನ್ ಶಿವಪ್ರಕಾಶ್, ಬೆಂಗಳೂರಿನ ವಿಲ್ಸನ್ ಗಾರ್ಡನ್ ಠಾಣೆಗೆ ನೀಡಿದ ದೂರು ರದ್ದುಪಡಿಸುವಂತೆ ಕೋರಿ ವೀರಯ್ಯ ಸಲ್ಲಿಸಿದ್ದ ಅರ್ಜಿ ನ್ಯಾಯಮೂರ್ತಿ ಎಸ್. ವಿಶ್ವಜಿತ್ ಶೆಟ್ಟಿ ಅವರ ಏಕಸದಸ್ಯ ಪೀಠದ ಮುಂದೆ ಈಚೆಗೆ ವಿಚಾರಣೆಗೆ ಪಟ್ಟಿಯಾಗಿತ್ತು. ಈಗಾಗಲೇ ಪ್ರಕರಣದಲ್ಲಿ ಆರೋಪಪಟ್ಟಿ ಸಲ್ಲಿಕೆಯಾಗಿದೆ. ವಿಚಾರಣಾಧೀನ ನ್ಯಾಯಾಲಯವು ಆರೋಪಪಟ್ಟಿಯ ಸಂಜ್ಞೇಯವನ್ನು ಇನ್ನಷ್ಟೇ ಪರಿಗಣಿಸಬೇಕಿದೆ. ಈ ಹಂತದಲ್ಲಿ ವೀರಯ್ಯ ಸಲ್ಲಿಸಿರುವ ಅರ್ಜಿ ಊರ್ಜಿತವಾಗದ ಹಿನ್ನೆಲೆಯಲ್ಲಿ ಅದನ್ನು ಹಿಂಪಡೆಯಲು ನ್ಯಾಯಾಲಯ ಅನುಮತಿಸಿತು. ಜುಲೈ 12ರಂದು ವೀರಯ್ಯ ಅವರನ್ನು ಸಿಐಡಿ ಬಂಧಿಸಿತ್ತು. ಆನಂತರ ಅವರಿಗೆ ವಿಶೇಷ ನ್ಯಾಯಾಲಯ ಜಾಮೀನು ಮಂಜೂರು ಮಾಡಿತ್ತು.

**ಪ್ರಕರಣದ ಹಿನ್ನೆಲೆ:** ಡಿ ದೇವರಾಜ್ ಅರಸ್ ಟ್ರಕ್ ಟರ್ಮಿನಲ್ಸ್ ಕಂಪನಿ ವತಿಯಿಂದ ನಿರ್ಮಿಸುವ ಎಲ್ಲಾ ಟ್ರಕ್ ಟರ್ಮಿನಲ್‌ಗಳಲ್ಲಿ ಮತ್ತು ಟ್ರಕ್ ಟರ್ಮಿನಲ್‌ಗಳಿಗಾಗಿ ಪಡೆದ ಜಮೀನಿನಲ್ಲಿ ಕೆಲವು ದುರಸ್ತಿ ಮತ್ತು ನಿರ್ವಹಣೆ ಕಾಮಗಾರಿ ನಡೆಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಗಳಲ್ಲಿ ಪಾರದರ್ಶಕತೆ ಕಾಯಿದೆಗೆ (ಕೆಪಿಟಿಟಿ) ವಿರುದ್ಧವಾಗಿ ಡಿ.ಎಸ್. ವೀರಯ್ಯ ಅಧ್ಯಕ್ಷರಾಗಿದ್ದ ಅವಧಿ ಯಲ್ಲಿ ತುಂಡು ಗುತ್ತಿಗೆ ಆಧಾರದ ಮೇಲೆ ಅಭಿವೃದ್ಧಿ ಕಾರ್ಯ ಕೈಗೊಳ್ಳಲಾಗಿದೆ ಎಂದು ಶಿವಪ್ರಕಾಶ್ ದೂರು ದಾಖಲಿಸಿದ್ದರು. ತಾನು ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಜವಾಬ್ದಾರಿಯನ್ನು 19-11-2022 ರಂದು ವಹಿಸಿಕೊಂಡಿದ್ದು, ಕಂಪನಿಯ ಆಡಳಿತದಲ್ಲಿ ಕಂಡು ಬಂದಿದ್ದ ನ್ಯೂನತೆ ಹಾಗೂ ಅಭಿವೃದ್ಧಿ ಕಾರ್ಯದ ವೆಚ್ಚದ ವಿವರ ಪರಿಶೀಲಿಸಲಾಗಿ 47.10 ಕೋಟಿ ಮೌಲ್ಯದ ಅಭಿವೃದ್ಧಿ ಕೆಲಸಗಳು ಅನುಮಾನಸ್ಪದವಾಗಿದ್ದ ಹಿನ್ನೆಲೆಯಲ್ಲಿ ಸಾರಿಗೆ ಇಲಾಖೆಯ ಕಾರ್ಯದರ್ಶಿಗೆ 2022 ಮತ್ತು 2023ರಲ್ಲಿ ಮೂರು ಬಾರಿ ಸವಿವರ ವರದಿ ಸಲ್ಲಿಸಿದ್ದು ಜೊತೆಗೆ ಕ್ರಮಕೈಗೊಳ್ಳುವಂತೆ ಕೋರಿದ್ದೇನೆ ಎಂದು ಶಿವಪ್ರಕಾಶ್ ದೂರಿನಲ್ಲಿ ತಿಳಿಸಿದ್ದರು.


TEJAS NETWORKS

## ತೇಜಸ್ ನೆಟ್‌ವರ್ಕ್ಸ್ ಲಿಮಿಟೆಡ್

ನೋಂದಾಯಿತ ಮತ್ತು ಕಾರ್ಪೊರೇಟ್ ಕಚೇರಿ: ಜೆ.ಪಿ. ಸಾಫ್ಟ್‌ವೇರ್ ಪಾರ್ಕ್, ಪ್ಲಾಟ್ ನಂ. 25, ಸರ್ವೇ ನಂ. 13, 14, 17 & 18, ಕೋನಪ್ಪನ ಅಗ್ರಹಾರ ವಿಲೇಜ್, ಬೇಗೂರು ಹೋಬಳಿ, ಬೆಂಗಳೂರು-560 100, ಕರ್ನಾಟಕ, ಭಾರತ.
ಕಾರ್ಪೊರೇಟ್ ಐಡೆಂಟಿಟಿ ನಂಬರ್: L72900KA2000PLC026980 ದೂರವಾಣಿ: +91 80 4179 4600
ಫ್ಯಾಕ್ಸ್: +91 80 2852 0201 ಇಮೇಲ್: corporate@tejasnetworks.com ವೆಬ್‌ಸೈಟ್: www.tejasnetworks.com

### ಸೆಪ್ಟೆಂಬರ್ 30, 2024ಕ್ಕೆ ಅಂತ್ಯಗೊಂಡ ತ್ರೈಮಾಸಿಕ ಮತ್ತು ಆರು ತಿಂಗಳ ಅಪರಿಶೋಧಿತ ಕ್ರೋಢೀಕೃತ ಫಲಿತಾಂಶಗಳ ಸಾರಾಂಶ

(ಪ್ರತಿ ಷೇರಿನ ವಿವರ ಹೊರತುಪಡಿಸಿ ₹ ಕೋಟಿಗಳಲ್ಲಿ)

| ಕ್ರ. ಸಂ. | ವಿವರಗಳು | ಸೆಪ್ಟೆಂಬರ್ 30, 2024ಕ್ಕೆ ಅಂತ್ಯಗೊಂಡ ತ್ರೈಮಾಸಿಕ | ಸೆಪ್ಟೆಂಬರ್ 30, 2024ಕ್ಕೆ ಅಂತ್ಯಗೊಂಡ ಆರು ತಿಂಗಳು | ಸೆಪ್ಟೆಂಬರ್ 30, 2023ಕ್ಕೆ ಅಂತ್ಯಗೊಂಡ ತ್ರೈಮಾಸಿಕ |
|---|---|---|---|---|
| 1 | ಕಾರ್ಯಾಚರಣೆಗಳಿಂದ ಬಂದ ಒಟ್ಟು ಆದಾಯ* | 2,811.26 | 4,374.03 | 395.95 |
| 2 | ತೆರಿಗೆಗೆ ಮುನ್ನ ನಿವ್ವಳ ಲಾಭ/(ನಷ್ಟ) | 410.51 | 532.06 | (17.74) |
| 3 | ತೆರಿಗೆಯ ನಂತರ ನಿವ್ವಳ ಲಾಭ/(ನಷ್ಟ) | 275.18 | 352.66 | (12.64) |
| 4 | ಅವಧಿಯ ಒಟ್ಟು ಸಮಗ್ರ ಆದಾಯ/(ನಷ್ಟ) (ತೆರಿಗೆಯ ನಂತರ ಅವಧಿಗೆ ಒಳಗೊಂಡ ಲಾಭ/(ನಷ್ಟ) ಮತ್ತು ತೆರಿಗೆಯ ನಂತರ ಇತರೆ ಸಮಗ್ರ ಆದಾಯ/(ನಷ್ಟ)) | 274.53 | 350.85 | (10.59) |
| 5 | ಈಕ್ವಿಟಿ ಶೇರು ಬಂಡವಾಳ (ಮುಖ ಬೆಲೆ ₹ 10/- ಪ್ರತಿಯೊಂದಕ್ಕೆ) | 174.53 | 174.53 | 172.99 |
| 6 | ಮೀಸಲುಗಳು (ಮರುಮೌಲೀಕೃತ ಮೀಸಲುಗಳನ್ನು ಹೊರುತಪಡಿಸಿ) ಪರಿಶೋಧಿತ ಬ್ಯಾಲೆನ್ಸ್ ಶೀಟ್‌ನಲ್ಲಿ ತೋರಿಸಿರುವಂತೆ | – | – | – |
| 7 | ಪ್ರತಿ ಈಕ್ವಿಟಿ ಷೇರಿನ ಗಳಿಕೆ/(ನಷ್ಟ) (₹ 10/- ಪ್ರತಿಯೊಂದಕ್ಕೆ) | | | |
| | (i) ಮೂಲ ₹ | 16.06 | 20.61 | (0.74) |
| | (ii) ವಿಭಜಿತ ₹ | 15.75 | 20.22 | (0.74) |

ಟಿಪ್ಪಣಿ:
1. ಕಂಪನಿಯ ಪ್ರತ್ಯೇಕ ಪ್ರಮುಖ ಹಣಕಾಸು ಮಾಹಿತಿಯನ್ನು ಈ ಕೆಳಗೆ ನೀಡಲಾಗಿದೆ.

| ವಿವರಗಳು | ಸೆಪ್ಟೆಂಬರ್ 30, 2024ಕ್ಕೆ ಅಂತ್ಯಗೊಂಡ ತ್ರೈಮಾಸಿಕ | ಸೆಪ್ಟೆಂಬರ್ 30, 2024ಕ್ಕೆ ಅಂತ್ಯಗೊಂಡ ಆರು ತಿಂಗಳು | ಸೆಪ್ಟೆಂಬರ್ 30, 2023ಕ್ಕೆ ಅಂತ್ಯಗೊಂಡ ತ್ರೈಮಾಸಿಕ |
|---|---|---|---|
| ಕಾರ್ಯಾಚರಣೆಗಳಿಂದ ಬಂದ ಒಟ್ಟು ಆದಾಯ* | 2,810.14 | 4,372.17 | 394.51 |
| ತೆರಿಗೆಗೆ ಮುನ್ನ ನಿವ್ವಳ ಲಾಭ/(ನಷ್ಟ) | 411.28 | 535.67 | (14.40) |
| ತೆರಿಗೆಯ ನಂತರ ನಿವ್ವಳ ಲಾಭ/(ನಷ್ಟ) | 266.18 | 347.25 | (9.41) |

2. ಮೇಲಿನ ಸಾರಸತ್ವವು 2015ರ (ತಿದ್ದುಪಡಿ ಮಾಡಿದಂತೆ) ಸೆಬಿಯ ನಿಯಂತ್ರಣಗಳ (ಲಿಸ್ಟಿಂಗ್ ಬಾಧ್ಯತೆ ಮತ್ತು ಘೋಷಣೆಗಳ ಅವಶ್ಯಕತೆಗಳು) 33ನೇ ನಿಯಂತ್ರಣದಡಿ ಸ್ಟಾಕ್ ಎಕ್ಸ್‌ಚೇಂಜ್‌ನಲ್ಲಿ ಸಲ್ಲಿಸಲಾಗಿರುವ ತ್ರೈಮಾಸಿಕ ಅಪರಿಶೋಧಿತ ಆರ್ಥಿಕ ಫಲಿತಾಂಶದ ವಿಸ್ತೃತ ನಮೂನೆಯ ಸಾರಾಂಶವಾಗಿದೆ. ಈ ತ್ರೈಮಾಸಿಕ ಅಪರಿಶೋಧಿತ ಆರ್ಥಿಕ ಫಲಿತಾಂಶಗಳ ಪೂರ್ಣ ನಮೂನೆಯು ಸ್ಟಾಕ್ ಎಕ್ಸ್‌ಚೇಂಜ್(ಗಳ) ಮತ್ತು ಕಂಪನಿಯ (www.tejasnetworks.com) ವೆಬ್‌ಸೈಟ್‌ನಲ್ಲಿ ಲಭ್ಯವಿದೆ.
3. ಸಾಂಖ್ಯ ಲ್ಯಾಬ್ಸ್ ಪ್ರೈವೇಟ್ ಲಿಮಿಟೆಡ್ (ಸಾಂಖ್ಯ ಲ್ಯಾಬ್ಸ್), ಸಾಂಖ್ಯ ಸ್ಟ್ರಾಟೆಜಿಕ್ ಎಲೆಕ್ಟ್ರಾನಿಕ್ಸ್ ಪ್ರೈವೇಟ್ ಲಿಮಿಟೆಡ್ (ಎಸ್‌ಎಸ್‌ಇ)ಗಳ ನಿರ್ದೇಶಕರ ಮಂಡಳಿ ಮತ್ತು ಕಂಪನಿಯು ಸೆಪ್ಟೆಂಬರ್ 29, 2022ರಂದು ನಡೆದ ತಮ್ಮ ಸಭೆಗಳಲ್ಲಿ, ಕಂಪನಿಗಳ ಕಾಯಿದೆ, 2013ರ ಸೆಕ್ಷನ್ 230 ರಿಂದ 232ರ ಅಡಿಯಲ್ಲಿ ಮತ್ತು ಇತರ ಅನ್ವಯವಾಗುವ ನಿಬಂಧನೆಗಳ ಅಡಿಯಲ್ಲಿ ಕಂಪನಿಯೊಂದಿಗೆ ಸಾಂಖ್ಯ ಲ್ಯಾಬ್ಸ್ ಮತ್ತು ಎಸ್‌ಎಸ್‌ಇಗಳ ವಿಲೀನಕ್ಕೆ ಸಂಬಂಧಿಸಿದಂತೆ ವಿಲೀನ ಯೋಜನೆ ("ಸ್ಕೀಮ್") ಕರಡುಗೆ ಅನುಮೋದನೆ ನೀಡಿತು. ಈ ಯೋಜನೆಯನ್ನು ಆಗಸ್ಟ್ 20, 2024ರಂದು ರಾಷ್ಟ್ರೀಯ ಕಂಪನಿ ಕಾನೂನು ನ್ಯಾಯಮಂಡಳಿ (NCLT) ಅನುಮೋದಿಸಿದೆ. ಕಂಪನಿಯು ಸೆಪ್ಟೆಂಬರ್ 5, 2024ರಂದು NCLT ಇಂದ ಆದೇಶದ ಪ್ರಮಾಣೀಕೃತ ಪ್ರತಿಯನ್ನು ಸ್ವೀಕರಿಸಿದೆ ಮತ್ತು ಸೆಪ್ಟೆಂಬರ್ 25, 2024ರಂದು ಕಂಪನಿಗಳ ರಿಜಿಸ್ಟ್ರಾರ್ (RoC) ಗೆ ಆದೇಶಗಳನ್ನು ಸಲ್ಲಿಸಿದೆ.
ಯೋಜನೆಯು ಜುಲೈ 1, 2022ರ ನಿಗದಿತ ದಿನಾಂಕವನ್ನು ಒದಗಿಸುತ್ತದೆ. ಏಪ್ರಿಲ್ 01, 2023ರಿಂದ ಜಾರಿಗೆ ಬರುವಂತೆ Ind AS 103ರ ಅನುಬಂಧ C ನ ವ್ಯಾಪಾರ ಸಂಯೋಜನೆಯೊಂದಿಗೆ ಸಾಮಾನ್ಯ ನಿಯಂತ್ರಣದಲ್ಲಿರುವ ಘಟಕಗಳಿಗೆ ಅನುಗುಣವಾಗಿ ಸ್ಕೀಮ್‌ನಲ್ಲಿ ನಿರ್ದಿಷ್ಟಪಡಿಸಿದ ಲೆಕ್ಕಪರಿಶೋಧಕ ನಡವಳಿಕೆಯ ಪ್ರಕಾರ ವಿಲೀನಕ್ಕಾಗಿ ಕಂಪನಿಯು ಲೆಕ್ಕಾಚಾರ ಮಾಡಿದೆ. ಕಂಪನಿಗಳ ರಿಜಿಸ್ಟ್ರಾರ್‌ಗೆ ಆದೇಶಗಳನ್ನು ಸಲ್ಲಿಸುವ ಅನುಸಾರವಾಗಿ, ಸಾಂಖ್ಯ ಲ್ಯಾಬ್ಸ್ ಮತ್ತು ಎಸ್‌ಎಸ್‌ಇ ಅನ್ನು ಮುಚ್ಚದೆಯೇ ವಿಸರ್ಜಿಸಲಾಗಿದೆ.
ಅನುಮೋದಿತ ಯೋಜನೆಯ ನಿಯಮಗಳಿಗೆ ಅನುಸಾರವಾಗಿ, ಸಾಂಖ್ಯ ಲ್ಯಾಬ್ಸ್‌ನ ಷೇರುದಾರರು ಸಾಂಖ್ಯ ಲ್ಯಾಬ್ಸ್‌ನಲ್ಲಿರುವ ಪ್ರತಿ 100 ಷೇರುಗಳಿಗೆ ಕಂಪನಿಯ 112 ಷೇರುಗಳನ್ನು ಪಡೆಯಬೇಕಾಗಿತ್ತು. ಸೆಪ್ಟೆಂಬರ್ 30, 2024ರಂತೆ ಷೇರುಗಳ ಹಂಚಿಕೆಯು ಬಾಕಿಯಿದೆ. ಸೆಪ್ಟೆಂಬರ್ 30, 2024ಕ್ಕೆ ಕೊನೆಗೊಂಡ ತ್ರೈಮಾಸಿಕದ ನಂತರ, ಕಂಪನಿಯು ಸಾಂಖ್ಯ ಲ್ಯಾಬ್ಸ್‌ನ ಮೇಲಿನ ಷೇರುದಾರರಿಗೆ 38,71,084 ಷೇರುಗಳನ್ನು ಹಂಚಿಕೆ ಮಾಡಿದೆ. ಸೆಪ್ಟೆಂಬರ್ 30, 2024ಕ್ಕೆ ಕೊನೆಗೊಂಡ ತ್ರೈಮಾಸಿಕದಲ್ಲಿ ಈ ಅಪರಿಶೋಧಿತ ಕ್ರೋಢೀಕೃತ ಹಣಕಾಸು ಫಲಿತಾಂಶಗಳಲ್ಲಿನ ಸಂಯೋಜನೆಯನ್ನು ಜಾರಿಗೆ ತರಲು, ಕಂಪನಿಯು:
ಎ) ಸಾಂಖ್ಯ ಲ್ಯಾಬ್ಸ್‌ನ ಮುಂದಕ್ಕೆ ತಂದ ನಷ್ಟಗಳು, ಕನಿಷ್ಠ ಪರ್ಯಾಯ ತೆರಿಗೆ (MAT) ಕ್ರೆಡಿಟ್ ಮತ್ತು ಕಡಿತಗೊಳಿಸಬಹುದಾದ ತಾತ್ಕಾಲಿಕ ವ್ಯತ್ಯಾಸಗಳನ್ನು ಅವು ಲಭ್ಯವಾಗುವಂತೆ ಕಂಪನಿಯ ಲಾಭಗಳ ವಿರುದ್ಧ ಸರಿದೂಗಿಸುವ ಸಂಬಂಧ ರೂ. 9.48 ಕೋಟಿಗಳ ಮುಂದೂಡಲ್ಪಟ್ಟ ತೆರಿಗೆ ಗುರುತಿಸಲಾಗಿದೆ.
ಬಿ) ನಿಯಂತ್ರಿಸದ ಬಡ್ಡಿ ಮೊತ್ತ ರೂ. 169.23 ಕೋಟಿಯನ್ನು ಸ್ವಾಧೀನಪಡಿಸಿಕೊಳ್ಳಲು ಆರಂಭದಲ್ಲಿ ಗುರುತಿಸಲಾದ ಹಣಕಾಸಿನ ಹೊಣೆಗಾರಿಕೆಯನ್ನು ಇತರ ಈಕ್ವಿಟಿಗೆ ಹಿಂತಿರುಗಿಸಲಾಗಿದೆ.
ಸಿ) ಸಾಂಖ್ಯ ಲ್ಯಾಬ್ಸ್‌ನಲ್ಲಿ 35.60% ಷೇರುಗಳನ್ನು ಹೊಂದಿರುವ ಷೇರುದಾರರಿಗೆ ನೀಡಲು ಬಾಕಿ ಉಳಿದಿರುವ ಷೇರುಗಳನ್ನು ಇತರ ಈಕ್ವಿಟಿ ಅಡಿಯಲ್ಲಿ ಸೇರಿಸಲಾಗಿದೆ.
4. ಪ್ರೊಡಕ್ಷನ್ ಲಿಂಕ್ಡ್ ಇನ್ಸೆಂಟಿವ್ (ಪಿಎಲ್‌ಐ) ಯೋಜನೆಯಡಿ ದೂರಸಂಪರ್ಕ ಇಲಾಖೆಯಿಂದ ಪಡೆದ ಅನುಮೋದನೆಗೆ ಅನುಗುಣವಾಗಿ, "ಇತರೆ ಕಾರ್ಯಾಚರಣಾ ಆದಾಯ" ಅಡಿಯಲ್ಲಿ ಮಾರ್ಚ್ 31, 2024ಕ್ಕೆ ಕೊನೆಗೊಂಡ ತ್ರೈಮಾಸಿಕ ಮತ್ತು ವಾರ್ಷಿಕ ಆರ್ಥಿಕ ಫಲಿತಾಂಶಗಳಲ್ಲಿ ಕಂಪನಿಯು ಮಾರ್ಚ್ 31, 2023 ಮತ್ತು ಮಾರ್ಚ್ 31, 2024ಕ್ಕೆ ಅಂತ್ಯಗೊಂಡ ಹಣಕಾಸು ವರ್ಷಕ್ಕೆ ಸಂಬಂಧಿಸಿದಂತೆ ಪಿಎಲ್‌ಐ ಇನ್ಸೆಂಟಿವ್‌ಅನ್ನು ಕ್ರಮವಾಗಿ ರೂ. 32.66 ಕೋಟಿ ಮತ್ತು ರೂ. 123.70 ಕೋಟಿಗಳನ್ನು ಪ್ರಸ್ತುತಪಡಿಸಿದೆ. ಕಂಪನಿಯು ಪಿಎಲ್‌ಐ ಯೋಜನೆಗೆ ಲಗತ್ತಿಸಲಾದ ಷರತ್ತುಗಳನ್ನು ಅನುಸರಿಸುವುದು ಮತ್ತು ಅನುದಾನವನ್ನು ಪಡೆಯಲಾಗುವುದು ಎಂಬ ಸಮಂಜಸವಾದ ಭರವಸೆಯನ್ನು ಪರಿಗಣಿಸಿ ಮೇಲೆ ತಿಳಿಸಿದ ಅನುಮೋದನೆಯ ಆಧಾರದ ಮೇಲೆ ಕಂಪನಿಯು ಸೆಪ್ಟೆಂಬರ್ 30, 2024ಕ್ಕೆ ಅಂತ್ಯಗೊಂಡ ತ್ರೈಮಾಸಿಕಕ್ಕೆ ರೂ. 156.10 ಕೋಟಿಗಳು ಮತ್ತು ಸೆಪ್ಟೆಂಬರ್ 30, 2024ಕ್ಕೆ ಅಂತ್ಯಗೊಂಡ ಆರು ತಿಂಗಳಿಗೆ ರೂ. 222.80 ಕೋಟಿಗಳ ಪಿಎಲ್‌ಐ ಇನ್ಸೆಂಟಿವ್‌ಅನ್ನು ಗುರುತಿಸಿದೆ.

* ಇತರೆ ಆದಾಯ ಹೊರತುಪಡಿಸಿದೆ.

ಮಂಡಳಿಯ ನಿರ್ದೇಶಕರುಗಳ ಪರವಾಗಿ
ಸಹಿ/-
ಆನಂದ್ ಎಸ್. ಅತ್ರೇಯ
ವ್ಯವಸ್ಥಾಪಕ ನಿರ್ದೇಶಕರು ಮತ್ತು ಮುಕಾಅ
(DIN: 10118880)

ಸ್ಥಳ : ಬೆಂಗಳೂರು
ದಿನಾಂಕ : ಅಕ್ಟೋಬರ್ 18, 2024

## PUBLIC NOTICE

My Client **Mr. Daulath Surendra Prashanth** Son of D.N. Surendra R/at No. 36, 10th A Cross, Kanakanagar, Bengaluru–560032 is the absolute owner of the **Flat bearing No. E-G9**, in the Ground Floor, measuring 1485 Square Feet of Super Built up area, consisting of Three Bedrooms in the Multistoried Building **Block – E**, known as "S.V.S Ananda Nilayam" constructed on Survey No. 93 and Survey No. 103 of **Kowdenahalli Village**, K.R.Puram Hobli, Bengaluru East Taluk, Bengaluru and he has purchased the said property by virtue of a Sale Deed dated 06.06.2012 which is duly registered as **Document No. KRI-1-02296-2012-13, Book–I, stored in C.D.No.KRID-437,** in the Office of the Sub-Registrar, K.R.Puram Bengaluru.

My client was travelling from BBMP office to his house at the above mentioned address on 19.10.2024. My client has lost the above said Original Sale Deed on 19.10.2024 and the same was not traceable. Thereafter he has lodged a E-lost Complaint with Bengaluru City Police on 19.10.2024 vide **Lost Report No. 1293867/2024.**

If anybody General Public having found/in possession of the said document may be handed over to the under signed Advocate/Address.

It is hereby cautioned / notified to the General Public, Banks, Financial Institutions, Societies that **"No Transaction shall be made upon the said lost document"**. If any person/s enter into any sort of transcation/s on the basis of the said document, the same will be treated as Null and Void.

Sd/-
**Ravi H.S, Advocate**
**M/s HSR Vakils, Advocates**
No. 477, 2nd Floor, 12th Cross,
Wilson Garden, Bengaluru–560 027.
Mob: 9886677303 / 9035077303
Place: Bengaluru Date: 20.10.2024

## PUBLIC NOTICE

The General public's and parties to the case are hereby informed that the below mentioned advocate has been appointed as court commissioner in case of Execution No. 1854/2019 arose out of FDP No.179/12 on the file of Hon'ble VI Additional City Civil and Session Judge at Bengaluru (CCH-11) to conduct pubic auction by conducting spot sale on 30-08-2022 at about 11 AM at schedule property i,e property /Site No.18 formed in Sy.No.14/5 measuring East to West 40 feet and North to South 40 feet of Deevatige Ramanahalli Village, Bengaluru City Corporation division No.21, situated at Sri.K.H.Ranganath Colony Kengeri Hobli, Bengaluru South Taluk bounded on consisting of compound and small shed which is mentioned as schedule property as per the order of the Hon'ble Court of dated 30-10-2024 and fixed court sale on 19/11/2024 at 11 am in the Court of City Civil Judge at Bengaluru (CCH-11) at 11. O' Clock, the court has fixed reserved value /auction amount for a sum of **Rs. 1.70.00.000 (Rupees One Crore Seventy Lakh only)** as reserved value for the auction of the schedule property subject to auction sale. Accordingly, I hereby calling upon to the General public including the petitioners in the above case to participate in the **public auction scheduled to be held on 30-10-2024 at 11, O'clock at schedule premises** and bid the property above the reserve value fixed by the court as stated above and further successive bidder shall deposit 25% of the bid amount with court commissioner on the same day or on the next day, further the successive bidder shall pay the balance bid amount within the time fixed by the court after court sale.

**SCHEDULE PROPERTY**

All that piece and parcel of Site No. 18, formed in Sy.No. 14/5 measuring East to West 40 feet and North to South 40 feet of Deevatige Ramanahalli Village, Bengaluru City Corporation division No.21, situated at Sri.K.H.Ranganath Colony Kengeri Hobli, Bengaluru South Taluk, bounded on consisting of compound and small shed bounded as follows: **East by :** Road, **West by :** Site No.19, **North by :** Road, **South by ;** Site No.29.

Address of Court commissioner
**Sri. Lakshmi Murthy**, Advocate
(KAR/1281/2010), M/s BSN and Associates,
1st Floor, Southwing, Kurubara Sangha Building
Gandhinagar, Bengaluru -09. Mob: 9902044217

## ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಶ್ರೀ. ಕೃಷ್ಣ ಮೂರ್ತಿ .ಎಸ್, ಬಿನ್ ಶ್ರೀ.ಸುಬ್ರಮಣಿ ಪಿ.ಆರ್, ಇವರು ಕೆಳಗೆ ಷೆಡ್ಯೂಲ್‌ನಲ್ಲಿ ತಿಳಿಸಿರುವ ಸ್ಥಿರಾಸ್ತಿ ಸ್ವತ್ತಿಗೆ ಮಾಲೀಕರಾಗಿರುತ್ತಾರೆ ಮತ್ತು ಶ್ರೀ.ಎಸ್.ಶೇಖರನ್ ಮತ್ತು ಶ್ರೀ. ಎಸ್.ಕೃಷ್ಣ ಮೂರ್ತಿ .ಎಸ್, ಇವರುಗಳ ನಡುವೆ ಮಾಡಿಕೊಂಡಿರುವ ನಕಲಿ ಪಾರ್ಟಿಶನ್ ಪತ್ರದ ದಿನಾಂಕ: 11-12-2014, ದಸ್ತಾವೇಜು ನಂ.9546/ 2014-15, 1ನೇ ಪುಸ್ತಕ, ಈ ಸ್ವತ್ತು, ಜಯನಗರ (ಜೆ.ಪಿ.ನಗರ) ಬೆಂಗಳೂರು. ಉಪ ನೋಂದಣಿ ಕಛೇರಿಯಲ್ಲಿ ನೋಂದಣಿಯಾಗಿರುವ ನಕಲಿ ಪಾರ್ಟಿಶನ್ ಡೀಡ್ ಪತ್ರವನ್ನು ಕಳೆದುಕೊಂಡಿರುತ್ತಾರೆ. ಈ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಯಾರಾದರೂ ಸ್ವತ್ತಿನ ಮೇಲೆ ಸ್ವಾಧೀನವನ್ನು ಹೊಂದಿದ್ದರೆ, ಅದನ್ನು ಈ ದಿನಾಂಕದಿಂದ ನೋಟೀಸು ಪ್ರಕಟವಾದ ಏಳು ದಿನಗಳ ಒಳಗಾಗಿ ಕೆಳಸಹಿದಾರರಿಗೆ ತಲುಪಿಸಬೇಕೆಂದು ಈ ಮೂಲಕ ತಿಳಿಸಲಾಗಿದೆ.

**ಷೆಡ್ಯೂಲ್ ಸ್ವತ್ತು**

ಬೆಂಗಳೂರು ದಕ್ಷಿಣ ತಾಲ್ಲೂಕು, ಬೇಗೂರು ಹೋಬಳಿ, ಹರಳುಕುಂಟೆ ದಾಖಲೆ, ಹೊಸಪಾಳ್ಯ, ಪ್ರಸ್ತುತ ಬಿ.ಬಿ.ಎಮ್.ಪಿ, ವ್ಯಾಪ್ತಿಯಲ್ಲಿ ಬರುವ ಸ್ಥಿರಾಸ್ತಿ ಸ್ವತ್ತಿನ ಬಿಯರಿಂಗ್ ಹೊಸ ನಂ.8, ಹಳೇ ನಂ.25, ಖಾತಾ ನಂ.126, ಅಸೆಸ್‌ಮೆಂಟ್ ನಂ.47/3, ಪಿ.ಐ.ಡಿ ನಂ. 126/25/8, ಮತ್ತು ಅರ್ಜಿ ನಂ.1400062374, ಇದರ ವಿಸ್ತೀರ್ಣ : ಪೂರ್ವದಿಂದ ಪಶ್ಚಿಮಕ್ಕೆ 40 ಅಡಿಗಳು, ಮತ್ತು ಉತ್ತರದಿಂದ ದಕ್ಷಿಣದಲ್ಲಿ 30 ಅಡಿಗಳು, ಒಟ್ಟಾರೆ 1200 ಚದರ ಅಡಿಗಳು, ಈ ಸ್ವತ್ತಿಗೆ ಚಕ್ಕುಬಂದಿ:- **ಪೂರ್ವಕ್ಕೆ :** ಸ್ವತ್ತು ನಂ.28, **ಪಶ್ಚಿಮಕ್ಕೆ :** ರಸ್ತೆ, **ಉತ್ತರಕ್ಕೆ :** ಸ್ವತ್ತು ನಂ.24, **ದಕ್ಷಿಣಕ್ಕೆ :** ಸ್ವತ್ತು ನಂ.26,

**ಎನ್ ಜಗದೀಶ್ ಕುಮಾರ್, ವಕೀಲರು**
ನಂ.30/1, 2ನೇ ಮಹಡಿ, 7ನೇ ಕ್ರಾಸ್, ಎನ್.ಆರ್.ಕಾಲೋನಿ
ಬಸ್ ನಿಲ್ದಾಣದ ಹತ್ತಿರ, ಹೋಟೆಲ್ ದ್ವಾರಕ ಎದುರು,
ಬೆಂಗಳೂರು-560019,

## CB MANAGEMENT SERVICES (P) LIMITED
P-22, BONDEL ROAD, KOLKATA-700019

NOTICE is hereby given that the certificates for the undermentioned securities of the company have been lost and the holders of the securities have applied to the company to issue duplicate certificates.
Any person who has a claim in respect of the said securities should lodge such claim with the company at its registered office within 15 days from this date; else the company will proceed to issue duplicate certificates without further intimation.

| Registered in the Name of | Folio No. | Kind of Securities & Face Value | Certificate No. | Distinctive Nos. | No. of Shares |
|---|---|---|---|---|---|
| KAMLESH AGARWAL | Sk00990 | Face Value Rs. 10/- each | 34179 | 37416701-37416800 | 100 |
| | | | 36095 | 37608301-37608400 | 100 |
| | | | 65832 | 40582001-40582100 | 100 |
| | | | 191394 | 62709845-62709944 | 100 |
| | | | 191395 | 62709945-62709994 | 50 |
| | | | 191396 | 62709995-62710004 | 10 |
| | | | 191397 | 62710005-62710009 | 5 |

Place : Mumbai
Date : 20/10/2024
Names of Holders :
KAMLESH AGARWAL

## ಕರ್ನಾಟಕ ಬ್ಯಾಂಕ್ ಲಿಮಿಟೆಡ್
(ನೋಂದಾಯಿತ ಹಾಗೂ ಕೇಂದ್ರ ಕಛೇರಿ: ಮಂಗಳೂರು-575002)
ನಿಮ್ಮ ಕುಟುಂಬದ ಬ್ಯಾಂಕ್, ಭಾರತದಾದ್ಯಂತ

ಶಾಖೆ: ಕಸ್ತೂರಿನಗರ
ನಂ. 303, 2ನೇ ಮುಖ್ಯರಸ್ತೆ,
ಕಸ್ತೂರಿನಗರ,
ಬೆಂಗಳೂರು-560043.

ದೂ: 080-22955934
ಇ-ಮೇಲ್: blr.kasturinagar@ktkbank.com
ವೆಬ್ ಸೈಟ್: www.karnatakabank.com
CIN: L85110KA1924PLC001128

### ಚಿನ್ನಾಭರಣಗಳ ಸಾರ್ವಜನಿಕ ಹರಾಜು ಸೂಚನೆ

ಈ ಕೆಳಕಂಡ ವ್ಯಕ್ತಿ ಅಡಮಾನ ಮಾಡಿರುವ ಚಿನ್ನಾಭರಣಗಳ ಮೇಲೆ ಪಡೆದಿರುವ ಸಾಲಗಳನ್ನು ನಮ್ಮ ತಗಾದೆ ಸೂಚನೆ (ಡಿಮ್ಯಾಂಡ್ ನೋಟೀಸ್)ಗಳ ಹೊರತಾಗಿಯೂ ಮೊತ್ತವನ್ನು ಮರುಪಾವತಿ ಮಾಡಿರುವುದಿಲ್ಲ. ಆದ್ದರಿಂದ, ಈ ಕೆಳಗೆ ಪ್ರಕಟಿಸಲಾದ ಹರಾಜಿನ ದಿನಾಂಕದ ಒಂದು ದಿನ ಮೊದಲು ಅಥವಾ ಹರಾಜಿನ ಸಮಯದ ಒಳಗೆ ಅಸಲು/ ಬಡ್ಡಿ ಮತ್ತು ಇತರ ಶುಲ್ಕಗಳನ್ನು ಪಾವತಿಸದಿದ್ದರೆ, ಬ್ಯಾಂಕಿನ ನಿಯಮಗಳು ಮತ್ತು ನಿಬಂಧನೆಗಳಿಗೆ ಒಳಪಟ್ಟು ಅಡಮಾನ ಮಾಡಿರುವ ಚಿನ್ನಾಭರಣಗಳನ್ನು **ಮಧ್ಯಾಹ್ನ 3.00 ಗಂಟೆಗೆ** ಬ್ಯಾಂಕಿನ ಆವರಣದಲ್ಲಿ ಸಾರ್ವಜನಿಕವಾಗಿ ಹರಾಜು ಮಾಡಲಾಗುವುದು ಎಂಬುದನ್ನು ದಯವಿಟ್ಟು ಗಮನಿಸಿ.

ಯಾವುದೇ ಕಾರಣಗಳನ್ನು ಮತ್ತು ಸೂಚನೆಯನ್ನು ನೀಡದೆ ಹರಾಜನ್ನು ಯಾವುದೇ ಅನುಕೂಲಕರ ದಿನಾಂಕಕ್ಕೆ ಮುಂದೂಡುವ / ರದ್ದುಗೊಳಿಸುವ ಹಕ್ಕನ್ನು ಬ್ಯಾಂಕ್ ಕಾಯ್ದಿರಿಸಿಕೊಂಡಿರುತ್ತದೆ.

| ಕ್ರಮ ಸಂಖ್ಯೆ | ಸಾಲದ ಖಾತೆ ಸಂಖ್ಯೆ | ಸಾಲದ ದಿನಾಂಕ | ಸಾಲಗಾರರ ಹೆಸರು | ರೂಪಾಯಿಗಳಲ್ಲಿ ಬಾಕಿ# | ಸ್ಥಳ ಮತ್ತು ಹರಾಜಿನ ದಿನಾಂಕ ಮತ್ತು ಸಮಯ, ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ |
|---|---|---|---|---|---|
| 01 | 9207002000158701 | 27.07.2023 | ಪುಷ್ಪ ಪಿ. ರಾವ್ | ರೂ.5,60,440.10 | ಕರ್ನಾಟಕ ಬ್ಯಾಂಕ್ ಲಿಮಿಟೆಡ್ ಕಸ್ತೂರಿನಗರ ಶಾಖೆ, ನಂ. 303, 2ನೇ ಮುಖ್ಯರಸ್ತೆ, ಕಸ್ತೂರಿನಗರ, ಬೆಂಗಳೂರು-560043. ಹರಾಜಿನ ದಿನಾಂಕ: 25.10.2024 ಮಧ್ಯಾಹ್ನ 3.00 ಗಂಟೆಗೆ ಫೋನ್: 080-22955935 |
| 02 | 9207002000158801 | 27.07.2023 | ಪುಷ್ಪ ಪಿ. ರಾವ್ | ರೂ.5,71,645.24 | |

\# + ಮುರಿದ ಅವಧಿಯ ಬಡ್ಡಿ + ಇತರ ಶುಲ್ಕಗಳು

ದಿನಾಂಕ: 19.10.2024
ಸ್ಥಳ: ಬೆಂಗಳೂರು
ಸಹಿ/-
ಉಪ ಪ್ರಧಾನ ವ್ಯವಸ್ಥಾಪಕರು, ಕರ್ನಾಟಕ ಬ್ಯಾಂಕ್ ಪ್ರಾದೇಶಿಕ ಕಛೇರಿ, ಕಸ್ತೂರಿನಗರ ಶಾಖೆ, ಬೆಂಗಳೂರು